ಓಎಸ್ 282/2022

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 03.06.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿಗಳ ಪರ ವಕೀಲರಿಂದ**

ದಾವ ಆಸ್ತಿಯು ವಾದಿಯ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ. ದಾವ ಆಸ್ತಿಯು ವಾದಿಯವರ ಕುಟುಂಬಕ್ಕೆ ಸೇರಿದ್ದು, ತಲತಲಾಂತರಗಳಿಂದ ಅವರೇ ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ದಾವ ಆಸ್ತಿಯ ಖಾತೆಯು ವಾದಿಯ ಪೂರ್ವಜರಿಂದ ವಾದಿಯ ಹೆಸರಿಗೆ ವರ್ಗಾವಣೆಯಾಗಿದೆ ಎಂದರೆ ಸರಿಯಲ್ಲ. ದಾವ ಆಸ್ತಿಯು ಮೂಲತಃ ವಾದಿಯ ಅಜ್ಜಿ ಭೋಗಮ್ಮ ರವರ  ಹೆಸರಿಗೆ ಸೇರಿದ್ದು ಎಂದರೆ ಸರಿಯಲ್ಲ. ದಾವ ಆಸ್ತಿಯು ವಾದಿಯ ಅಜ್ಜಿ ಭೋಗಮ್ಮ ರವರ ಹೆಸರಿಗೆ ಖಾತೆಯಿದ್ದು ಅವರೇ ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ನನ್ನ ತಾಯಿಯ ತಾಯಿಯ ಹೆಸರು ಭೋಗಮ್ಮ ಎಂದು ನುಡಿಯುತ್ತಾರೆ. ನನ್ನ ಅಜ್ಜಿಯ ಹೆಸರು ಸಹ ಭೋಗಮ್ಮ ಇರುವುದರಿಂದ ದಾವ ಆಸ್ತಿಯು ನಮ್ಮ ಅಜ್ಜಿಗೆ ಸೇರಿದ್ದು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಅಜ್ಜಿ ಭೋಗಮ್ಮ ಮೃತಪಟ್ಟ ನಂತರ ದಾವ ಆಸ್ತಿಯ ಖಾತೆ ವಾದಿಯ ಹೆಸರಿಗೆ ವರ್ಗಾವಣೆಗೊಂಡಿರುತ್ತದೆ ಎಂದರೆ ಸರಿಯಲ್ಲ. ದಾವ ಆಸ್ತಿಯ ಖಾತೆ ವಾದಿಯ ಹೆಸರಿಗೆ ವರ್ಗಾವಣೆಯಾದ ನಂತರ ವಾದಿಯು ತಮ್ಮ ಇತರ ಆಸ್ತಿಗಳ ಜೊತೆ ದಾವ ಆಸ್ತಿಯನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

2. ವಾದಿಯು ದಾವ ಆಸ್ತಿಯನ್ನು ಅವರ ಅಜ್ಜಿ  ಭೋಗಮ್ಮ ರವರ ಹೆಸರಿನಿಂದ ತನ್ನ ಹೆಸರಿಗೆ ವರ್ಗಾವಣೆ ಮಾಡುವಂತೆ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅದೇ ರೀತಿ ಕಂದಾಯ ಅಧಿಕಾರಿಗಳು ಎಂ.ಆರ್. ನಂಬರ್ 15/90-91 ರಂತೆ ವಾದಿಯ ಹೆಸರಿಗೆ ದಾವ ಆಸ್ತಿಯ ಖಾತೆ ವರ್ಗಾವಣೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವ

ಆಸ್ತಿಯು ವಾದಿಯ ಪೂರ್ವಜರ ಸ್ವತ್ತಾಗಿದ್ದು, ವಾದಿಯೇ ದಾವ ಆಸ್ತಿಯ ಸಂಪೂರ್ಣ ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ದಾವ ಆಸ್ತಿಯನ್ನು ನನ್ನ ತಾತ ರಂಗಶೆಟ್ಟಿ ರವರು ಹರಾಜಿನ ಮೂಲಕ ಸರ್ಕಾರದಿಂದ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವ ಆಸ್ತಿಯನ್ನು ನನ್ನ ತಾತ ಹರಾಜಿನ ಮೂಲಕ ಖರೀದಿಸಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಾನು ಆ ರೀತಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

3. ನನ್ನ ತಂದೆ ಮತ್ತು ತಾಯಿ ಕೆಬ್ಬೆಪುರ ಗ್ರಾಮದವರಲ್ಲ ಮತ್ತು ಬೇರೆ ಗ್ರಾಮದಿಂದ ಕೆಬ್ಬೆಪುರ ಗ್ರಾಮದಲ್ಲಿ ಬಂದು ನೆಲೆಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಾತ ರಂಗಶೆಟ್ಟಿ ಎಂದು ಹೇಳುತ್ತಿರುವ ವ್ಯಕ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ತಾತ ರಂಗಶೆಟ್ಟಿ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ದಾವ ಆಸ್ತಿಯ ಖಾತೆಯನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದಾಗ ಆರ್.ಆರ್.ಟಿ 99/2017-18 ರಂತೆ ಯತಾಃಸ್ಥಿತಿ ಕಾಪಾಡಲು ತಹಶೀಲ್ದಾರ್ ರವರು ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ಆದಾಗಿಯು ಸಹ ನಾನು ಕಂದಾಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಪಹಣಿ ಕಲಂ ನಂಬರ್ 9 ಮತ್ತು 12 ರಲ್ಲಿ ರಂಗಶೆಟ್ಟಿ ರವರ ಹೆಸರನ್ನು ಸೇರ್ಪಡೆ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ತಹಶೀಲ್ದಾರ್ ರವರ ಆದೇಶವನ್ನು ಉಲ್ಲಂಘಿಸಿ ರಂಗಶೆಟ್ಟಿ ರವರ ಹೆಸರಿಗೆ ದಾವ ಆಸ್ತಿಯನ್ನು ಖಾತೆ ಮಾಡಿರುದನ್ನು ಪ್ರಶ್ನಿಸಿ ವಾದಿಯು ಚಾಮರಾಜನಗರದ ಉಪ ವಿಭಾಗ ಅಧಿಕಾರಿಗಳ ನ್ಯಾಯಾಲಯದಲ್ಲಿ ಆರ್.ಎ 401/2019 ರಂತೆ ಮೇಲ್ಮನವಿ ಸಲ್ಲಿಸಿ ಎಂ.ಆರ್. ನಂಬರ್ 15/90-91 ರಂತೆ ಖಾತೆ ಮುಂದುವರೆಸಲು ಕೋರಿದ್ದರು ಎಂದರೆ ಸರಿಯಲ್ಲ. ಸದರಿ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನಾನು ಸಹ ಒಂದು ಆರ್ .ಎ 48/2020 ರಂತೆ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ರಂಗಶೆಟ್ಟಿ ರವರ ಹೆಸರಿನಲ್ಲಿ ದಾವ ಆಸ್ತಿಯ ಖಾತೆಯಾಗಿದ್ದರು ಸಹ ಯಾವ ಕಾರಣಕ್ಕಾಗಿ ನೀವು ಮೇಲ್ಮನವಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಮೇಲ್ಮನವಿ ಸಲ್ಲಿಸಿದ್ದೆ ಎಂದು ನುಡಿಯುತ್ತಾರೆ. ಉಪ ವಿಭಾಗಾಧಿಕಾರಿಗಳು ನನ್ನ ಮೇಲ್ಮನವಿಯನ್ನು ತಪ್ಪಾಗಿ ಪುರಸ್ಕರಿಸಿದ್ದಾರೆ ಎಂದರೆ ಸರಿಯಲ್ಲ.

ಸದರಿ ಉಪ ವಿಭಾಗಾಧಿಕಾರಿಗಳ ಆದೇಶದ ವಿರುದ್ಧ ವಾದಿಯು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್.ಎ 63/2023 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ನಮ್ಮ ಪರವಾಗಿ ಆದೇಶವಾಗಿದೆ ಎಂದು ನುಡಿಯುತ್ತಾರೆ.

4. ದಾವ ಆಸ್ತಿಯು ನಮ್ಮ ಕುಟುಂಬಕ್ಕೆ ಸೇರಿದ್ದಲ್ಲ ಹಾಗೂ ದಾವ ಆಸ್ತಿಯಲ್ಲಿ ನಾವು ಯಾವತ್ತು ವ್ಯವಸಾಯ ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 62 ರಲ್ಲಿ ಸಾಕಷ್ಟು ಪೋಡ್ ಗಳಿದ್ದು, ಯಾವುದೋ ಪೋಡಿನ ಆಸ್ತಿ ರಂಗಶೆಟ್ಟಿ ರವರ ಹೆಸರಿಗೆ ಖಾತೆಯಾಗಿದ್ದು, ಅದನ್ನು ನಾನು ಕ್ಲೇಮು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಕಾನೂನಿನ ವಿರುದ್ಧವಾಗಿ ಖಾತೆ ಮಾಡಿಸಿಕೊಂಡಿದ್ದು, ಅದು ಊರ್ಜಿತವಲ್ಲ ಎಂದರೆ ಸರಿಯಲ್ಲ. ಈ ಹಿಂದಿನಿಂದಲೂ ಸಹ ದಾವ ಆಸ್ತಿಯ ಖಾತೆ ವಾದಿಯ ಕುಟುಂಬದವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಇವತ್ತಿಗೂ ಸಹ ವಾದಿಯೇ ಸ್ವಾಧೀನದಲ್ಲಿದ್ದಾರೆ ಮತ್ತು ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಯ ಖಾತೆಯನ್ನು ಕಾನೂನು ಬಾಹಿರವಾಗಿ ನನ್ನ ಹೆಸರಿನಲ್ಲಿ ಮಾಡಿಸಿಕೊಂಡು ದಿನಾಂಕ 12.11.2022 ರಂದು ವಾದಿಯ ದಾವ ಆಸ್ತಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ವಾದಿಯು ದಾವ ಆಸ್ತಿಯಲ್ಲಿ ಉಳುಮೆ ಮಾಡುತ್ತಿದ್ದಾಗ ಅವರನ್ನು ಅಲ್ಲಿಂದ ಒಕ್ಕಲೆಬ್ಬಿಸಲು ಪ್ರಯತ್ನಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನಾಂಕದಂದು ವಾದಿಯು ಅಕ್ಕಪಕ್ಕದವರ ಸಹಾಯದಿಂದ ನಮ್ಮನ್ನು ತಡೆದಿದ್ದಾರೆ ಎಂದರೆ ಸರಿಯಲ್ಲ.

5. ದಿನಾಂಕ 16.11.2022 ರಂದು ಪುನಃ ನಾನು ವಾದಿಯ ದಾವ ಆಸ್ತಿಯ ಸ್ವಾಧೀನಕ್ಕೆ ತೊಂದರೆ ಕೊಟ್ಟಿದ್ದೇನೆ ಮತ್ತು ವಾದಿ ಅದನ್ನು ಅಕ್ಕಪಕ್ಕದವರ ಸಹಾಯದಿಂದ ತಡೆದು ಪಂಚಾಯಿತಿದಾರರಿಗೂ ಸಹ ತಿಳಿಸಿದ್ದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ವಾದಿಯು ಪೊಲೀಸರಿಗೂ ಸಹ ದೂರು ನೀಡಿದ್ದರು, ಪೊಲೀಸರು ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳುವಂತೆ ತಿಳಿಸಿದ್ದರು ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ಹಕ್ಕು ಮಾಲಿಕತ್ವ ಮತ್ತು ಸ್ವಾಧೀನಾನುಭವನ್ನು ವಾದಿಯು ತಲೆತಲಾಂತರದಿಂದ ಹೊಂದಿದ್ದು, ಎಲ್ಲ ಋಣಗಳಿಂದಲೂ

ಮುಕ್ತವಾಗಿರುತ್ತದೆ ಎಂದರೆ ಸರಿಯಲ್ಲ. ನಮಗೆ ದಾವ ಆಸ್ತಿಯ ಮೇಲೆ ಯಾವುದೇ ಹಕ್ಕು, ಹಿತಾಸಕ್ತಿ ಮತ್ತು ಮಾಲೀಕತ್ವ ಹಾಗೂ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಅದಾಗಿಯೂ ಸಹ ದಾವ ಆಸ್ತಿಯ ಮೇಲೆ ಹಕ್ಕು ಚಲಾಯಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು 12 ವರ್ಷಗಳಿಂದಲೂ ಸಹ ವಾದಿಯು ದಾವ ಆಸ್ತಿಯಲ್ಲಿ ನಿರುಪಾದಿಕ ಮತ್ತು ಪ್ರತಿಕೂಲ ಸ್ವಾಧೀನ ಹೊಂದಿದ್ದು ಈ ವಿಚಾರ ಗ್ರಾಮಸ್ಥರಿಗೂ ಸಹ ತಿಳಿದಿದೆ ಎಂದರೆ ಸರಿಯಲ್ಲ. ರಂಗಶೆಟ್ಟಿ ರವರು ನನ್ನ ತಾತ ಎಂದು ತೋರಿಸಲು ಮತ್ತು ದಾವ ಆಸ್ತಿಯನ್ನು ರಂಗಶೆಟ್ಟಿ ರವರು ಹರಾಜಿನ ಮೂಲಕ ಖರೀದಿಸಿದ್ದಾರೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ